# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 170 |
| 2 | ಸದಸ್ಯರ ಹೆಸರು | ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 17.07.2019 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಂದಾಯ ಇಲಾಖೆಯಲ್ಲಿ ಮಂಜೂರಾದ ಒಟ್ಟು ಸರ್ವೇಯರ್ ಹುದ್ದೆಗಳೆಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;</td><td>ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 4020 ಸರ್ವೇಯರ್ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 354 ಸರ್ವೇಯರ್ ಹುದ್ದೆ ಖಾಲಿ ಇರುತ್ತದೆ.<br><br>
<table><tr><th>ಮಂಜೂರು</th><th>ಭರ್ತಿ</th><th>ಖಾಲಿ</th></tr><tr><td>4020</td><td>3666</td><td>354</td></tr></table></td></tr>
<tr><td>ಆ)</td><td>ಸರ್ವೇಯರ್‌ಗಳು ಸರ್ವೇ ಕಾರ್ಯ ಮಾಡಲು ವಿಳಂಬ ಮಾಡುತ್ತಿರುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.<br>ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಅಳತೆ ಕೋರಿ ಬರುವ ಅರ್ಜಿಗಳನ್ನು ONLINE ನಲ್ಲಿ ಸ್ವೀಕರಿಸಿ, ಅಳತೆಗೆ ನೀಡಿ ಅಳತೆಯಾದ ನಂತರ ಭೂಮಾಪಕರು ONLINE ನಲ್ಲಿ ಕಡತಗಳನ್ನು upload ಮಾಡಲು ಅವಕಾಶ ಕಲ್ಪಿಸಲಾಗಿದೆ. ಹಾಗೂ ಕಡತಗಳ ಬಾಬ್ತು ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ONLINE ನಲ್ಲೇ ನಿರ್ವಹಿಸಲಾಗುತ್ತಿದೆ. ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಕಡತಗಳನ್ನು ನಿರ್ವಹಿಸಲಾಗುತ್ತಿದೆ.<br>ಸ್ವೀಕರಿಸಿದ ಎಲ್ಲಾ ಕಡತಗಳನ್ನು ಗಣಕ ವ್ಯವಸ್ಥೆಯ ಮೂಲಕ ನಿರ್ವಹಿಸಲಾಗುತ್ತಿದ್ದು ಕಡತ ನಿರ್ವಹಣೆಯಲ್ಲಿ ಯಾವುದೇ ಹಂತದಲ್ಲಿ ಅಧಿಕಾರಿ/ ಸಿಬ್ಬಂದಿಗಳು ವಿಳಂಬ ಧೋರಣೆ ಅನುಸರಿಸುತ್ತಿರುವುದು ಮೋಜಿಣಿ ವ್ಯವಸ್ಥೆಯಲ್ಲಿ ಕಂಡು ಬಂದಲ್ಲಿ ಅಂತಹವರ ವಿರುದ್ಧ ಇಲಾಖಾ ವತಿಯಿಂದ ಅಂತಹವರಿಗೆ ನೋಟೀಸ್ / ಕಾರಣ ಕೇಳಿ ನೋಟೀಸ್ ನೀಡಿ ವಿಚಾರಣೆಯನ್ನು ಮಾಡಿ ಶಿಸ್ತುಕ್ರಮ ಕೈಗೊಂಡು ದಂಡನೆಯನ್ನು ವಿಧಿಸಲಾಗುತ್ತಿದೆ.</td></tr>
</table>

| | | |
|---|---|---|
| ಇ) | ಸರ್ಕಾರ ಅಗತ್ಯ ಸರ್ವೇಯವರುಗಳನ್ನು ನೇಮಿಸಿ ಸಕಾಲದಲ್ಲಿ ರೈತರಿಗೆ ಸೇವೆ ಒದಗಿಸಲು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ 2013 ರಿಂದ 2018 ರವರೆಗೆ ಒಟ್ಟು-2983 ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br>ಮುಂಬಡ್ತಿಗೆ ಮೀಸಲಾದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |

ಕಂಇ 60 ಎಜಿಎಸ್ 2019

(ಆರ್. ವಿ. ದೇಶಪಾಂಡೆ)

ಕಂದಾಯ ಸಚಿವರು